ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಗಮನ ಸೆಳೆಯುವ ಸೂಚನೆಗಿಂತ ಮುಂಚಿತವಾಗಿಯೂ ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡಿ ಹೇಳಿಬಿಡುತ್ತೇನೆ. ಇದರಿಂದ ಅವರಿಗೂ ಸಹ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—334ರ ಮೇಲೆ ಚರ್ಚೆ ಮಾಡುವುದಕ್ಕೆಂದೇ ಒಂದು ದಿವಸ ಚರ್ಚೆಗೆ ಇಟ್ಟುಕೊಂಡುಬಿಡೋಣ.

ಶ್ರೀ ಎಸ್. ಬಂಗಾರಪ್ಪ.—ದಿವಸಾನೂ ಇದೇ ಉದ್ಯೋಗ ಬಿಡಿ. ದಿವಸಾನೂ ಪ್ರಸ್ತಾಪ ಮಾಡಲೇ ಬೇಕಾಗಿದೆ. ಏನು ಮಾಡುವುದಕ್ಕೆ ಆಗುತ್ತದೆ.

ಗಮನ ಸೆಳೆಯುವ ಸೂಚನೆ

ವಿಷಯ : ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇಮಕಾತಿಗಳಲ್ಲಿ ಆದ ಅನ್ಯಾಯದ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ.—ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇಮಕಾತಿ ನಿಯಮಗಳಿಂದಾದ ಅನ್ಯಾಯದ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯಮಂತ್ರಿಗಳು).—(1) ಕರ್ನಾಟಕ ನಾಗರೀಕ ಸೇವೆಗಳು (ಬೆರಳಚ್ಚುಗಾರರು, ಕಿರಿಯ ಶೀಘ್ರಲಿಪಿಗಾರರ ಮತ್ತು ಶೀಘ್ರಲಿಪಿಗಾರರ ನೇಮಕಾತಿ) ನಿಯಮಗಳು, 1977ರಲ್ಲಿ ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ಹುದ್ದೆಗಳು ಇಂಗ್ಲೀಷ್ ಬೆರಳಚ್ಚುಗಾರರು/ಶೀಘ್ರಲಿಪಿಗಾರರು ಹಾಗೂ ಕನ್ನಡ ಬೆರಳಚ್ಚುಗಾರರು/ಶೀಘ್ರಲಿಪಿಗಾರರು ಎಂದು ಪ್ರತ್ಯೇಕಿಸಲ್ಪಟ್ಟಿದ್ದವು. ಈ ಎರಡು ಹುದ್ದೆಗಳಿಗೆ ಪ್ರತ್ಯೇಕ ವಿದ್ಯಾರ್ಹತೆಯನ್ನೂ ಸಹ ನಿಯಮಗಳಲ್ಲಿ ನಿಗದಿಪಡಿಸಿತ್ತು. 'ಕನ್ನಡ' ಭಾಷೆಯು ರಾಜ್ಯದ ಆಡಳಿತ ಭಾಷೆಯಾಗಿರುವುದರಿಂದ ಮತ್ತು ಎಲ್ಲ ಸರ್ಕಾರಿ ವ್ಯವಹಾರಗಳೂ ಕನ್ನಡದಲ್ಲಿ ನಡೆಯಬೇಕಾಗಿರುವುದರಿಂದ ದಿನಾಂಕ 25-1-1982ರ ಅಧಿಕೃತ ಜ್ಞಾಪನಪತ್ರ ಕ್ರಮಾಂಕ ಡಿಪಿಎಆರ್ 2 ಎಸ್‌ಪಿಆರ್ 1982ರಲ್ಲಿ ಎಲ್ಲ ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳನ್ನು ಕನ್ನಡ ಶೀಘ್ರಲಿಪಿಗಾರರ ಹಾಗೂ ಬೆರಳಚ್ಚುಗಾರರ ಹುದ್ದೆಗಳೆಂದು ಪರಿಗಣಿಸಬೇಕಾಗಿ ಆದೇಶಿಸಲ್ಪಟ್ಟಿತ್ತು.

(2) ಆದುದರಿಂದ, ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿಯನ್ನು ಮಾಡಬೇಕಾಯಿತು. ಕಾಲಕ್ರಮೇಣ ಎಲ್ಲ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು ಇಂಗ್ಲೀಷ್‌ನಲ್ಲಿ ಬೆರಳಚ್ಚು ಹಾಗೂ ಶೀಘ್ರಲಿಪಿಯ ಕೆಲಸವನ್ನು ಮಾಡಬೇಕಾಗಿಲ್ಲದಿದ್ದರೂ, ಆಡಳಿತ ಭಾಷೆಯು ಇಂಗ್ಲೀಷ್‌ನಿಂದ ಕನ್ನಡಕ್ಕೆ ಬದಲಾವಣೆಯಾಗುತ್ತಿರುವ ಈ ಅಲ್ಪಾವಧಿಯಲ್ಲಿ ಎರಡು ಭಾಷೆಯ ಉಪಯೋಗವನ್ನೂ ಪಡೆಯಬೇಕಾಗಿರುವುದರಿಂದ, ಇಂಗ್ಲೀಷ್ ಹಾಗೂ ಕನ್ನಡ ಎರಡು ಭಾಷೆಯ ಬೆರಳಚ್ಚು ಹಾಗೂ ಶೀಘ್ರಲಿಪಿಯಲ್ಲಿ ಅರ್ಹತೆಯಿರುವ ಬೆರಳಚ್ಚುಗಾರರ ಹಾಗೂ ಶೀಘ್ರಲಿಪಿಗಾರರ ನೇಮಕಾತಿಯನ್ನು ಮಾಡಬೇಕಾಗುತ್ತದೆ.

(3) ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು, ಅಧಿಸೂಚನೆ ಕ್ರಮಾಂಕ: ಡಿಪಿಎಆರ್ 27 ಎಸ್‌ಪಿಆರ್ 83 ದಿನಾಂಕ 10-5-1983, ಇದರಲ್ಲಿ ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ನೇಮಕಾತಿಗೆ ಹೊಸ ನಿಯಮಾವಳಿಯನ್ನು ಹೊರಡಿಸಲಾಗಿದೆ. ಈ ನಿಯಮದಲ್ಲಿ ಬೆರಳಚ್ಚುಗಾರರ/ಶೀಘ್ರಲಿಪಿಗಾರರ ಹುದ್ದೆಗೆ, ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಬೆರಳಚ್ಚು/ಶೀಘ್ರಲಿಪಿ ವಿದ್ಯಾರ್ಹತೆಯನ್ನು ನಿಗದಿಪಡಿಸಿತ್ತಲ್ಲದೆ ಒಂದುವೇಳೆ ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಯಲ್ಲಿ ಬೆರಳಚ್ಚು ಹಾಗೂ ಶೀಘ್ರಲಿಪಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ದೊರೆಯದಿದ್ದಸಂದರ್ಭದಲ್ಲಿ, ಕನ್ನಡ ಬೆರಳಚ್ಚು ಹಾಗೂ ಶೀಘ್ರಲಿಪಿಯ ವಿದ್ಯಾರ್ಹತೆಯನ್ನು ಪಡೆದಿರುವ ಅಭ್ಯರ್ಥಿಗಳ ಆಯ್ಕೆಗೆ ಅವಕಾಶವಿದೆ. ಈ ನಿಯಮಗಳ ಪ್ರಕಾರ ಎರಡೂ ಭಾಷೆ ಬಲ್ಲವರಿಗೆ ಆದ್ಯತೆ, ಅಂತಹವರು ಸಾಕಷ್ಟು ಸಂಖ್ಯೆಯಲ್ಲಿ ದೊರೆಯದಿದ್ದರೆ, ಬರೇ ಕನ್ನಡ ಮಾತ್ರ ಬಲ್ಲವರನ್ನು ಆಯ್ಕೆ ಮಾಡಲಾಗುವುದು. ಇದರಿಂದ ಕನ್ನಡದಲ್ಲಿ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಗೆ ಯಾವ ರೀತಿಯ ಅನ್ಯಾಯವೂ ಆಗುವುದಿಲ್ಲ.

ಅಧ್ಯಕ್ಷರೇ, ಒಂದೇ ಒಂದು ವಾಕ್ಯವನ್ನು ಇದರ ಜೊತೆಗೆ ಜೋಡಿಸಬೇಕೆಂದು ಇದ್ದೇನೆ. ಅದು ಏನೆಂದರೆ ಈಗ ಒಂದು ಟ್ರಾನ್ಸಿಷನ್ ಪೀರಿಯಡ್‌ನಲ್ಲಿರುವುದರಿಂದ ಈ ಕ್ರಮ, ಆದರೆ ಆದಷ್ಟು ಬೇಗ ಎಲ್ಲಾ ಹಂತಗಳಲ್ಲೂ ಕೂಡ ಕನ್ನಡ ಭಾಷೆ ಬಳಸಬೇಕೆಂದು ಹೇಳತಕ್ಕ ನಿರ್ಧಾರವನ್ನು, ನಿರ್ಣಯವನ್ನು ಈ ಸರ್ಕಾರ ತೆಗೆದುಕೊಂಡಿದೆ. ಆದರೆ ಇದನ್ನು ರಾತ್ರಿ ಬೆಳಗ್ಗೆಯಾಗುವುದರೊಳಗಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಎಲ್ಲಿಯವರೆಗೆ ಇಂಗ್ಲೀಷ್ ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ಅಗತ್ಯವಿದೆ ಅದಕ್ಕಾಗಿ ನಾವು ಪ್ರತ್ಯೇಕವಾಗಿ ಇಂಗ್ಲೀಷ್ ಬಲ್ಲವರನ್ನು ಒಬ್ಬಿಬ್ಬರನ್ನು ತೆಗೆದುಕೊಂಡರೆ, ನಾಳೆ ಕಡ್ಡಾಯವಾಗಿ ಎಲ್ಲಾ ಹಂತಗಳಲ್ಲೂ ಜಾರಿಗೆ ಬಂದ ಮೇಲೆ ಅವರನ್ನು ಏನು ಮಾಡಬೇಕು ಎಂದು ಹೇಳತಕ್ಕ ಸಮಸ್ಯೆ ಬರುತ್ತದೆ ಅವರನ್ನು ಕೆಲಸದಿಂದ ತೆಗೆದುಹಾಕತಕ್ಕ ಪ್ರಸಂಗ ಬರಬಹುದು. ಅದಕ್ಕಾಗಿ ನಾವು ಇಂಗ್ಲೀಷ್ ಬೆರಳಚ್ಚು.

ಮತ್ತು ಶೀಘ್ರಲಿಪಿ ಮತ್ತು ಕನ್ನಡ ಶೀಘ್ರಲಿಪಿ ಮತ್ತು ಬೆರಳಚ್ಚು ಎರಡೂ ಗೊತ್ತಿರಬೇಕೆಂದು ಹೇಳಿದ್ದೇವೆ. ಏತಕ್ಕೆಂದರೆ ಒಂದು ವರ್ಷವಾಗಲೀ 6 ತಿಂಗಳಾಗಲೀ ಅಥವಾ ಒಂದೂವರೆ ವರ್ಷವಾಗಲೀ ಸಂಪೂರ್ಣವಾಗಿ ಕನ್ನಡದಲ್ಲಿಯೇ ಎಲ್ಲಾ ಹಂತದಲ್ಲಿಯೂ ಆಗುತ್ತದೆಯೋ ಆಗ ಅವರನ್ನೂ ಸಹ ಮುಂದುವರಿಸಿಕೊಂಡು ಹೋಗಬಹುದು ಎನ್ನುವ ಉದ್ದೇಶದಿಂದ ಮಾಡಿದ್ದೇವೆ. ಇದರಿಂದ ಅವರಿಗೆ ಯಾರಿಗೂ ತೊಂದರೆ ಯಾಗುವುದಿಲ್ಲ.

ಶ್ರೀ ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ, ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು ಕನ್ನಡ ಮತ್ತು ಇಂಗ್ಲೀಷ್ ಎರಡನ್ನೂ ಕಲಿತಿರಬೇಕು, ಅಂಥವರಿಗೆ ಕೆಲಸವನ್ನು ಕೊಡುತ್ತೇವೆಂದು ಹೇಳಿದರು. ಇದರಿಂದ ಕನ್ನಡಿಗರಿಗೇ ಅದರಲ್ಲೂ ಗ್ರಾಮಾಂತರ ಪ್ರದೇಶದಿಂದ ಬರತಕ್ಕವರಿಗೆ ಅವಕಾಶವನ್ನು ಕಡಿದು ಹಾಕತಕ್ಕ ಪರಿಪಾಠವಾಗಿದೆ. ಏತಕ್ಕೆಂದರೆ ಇಂಗ್ಲೀಷನ್ನು ಕಲಿತಿರಬೇಕೆಂದರೆ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕವರಿಗೆ ಇಂಗ್ಲೀಷ್ ಎಲ್ಲಿಂದ ಬರುತ್ತದೆ? ಸಿಟಿಗಳಲ್ಲಿರತಕ್ಕವರು ಇಂಗ್ಲೀಷ್, ಕನ್ನಡ ಎರಡನ್ನೂ ಕಲಿತಿರುತ್ತಾರೆ. ಅಂಥವರಿಗೇ ಇದರಿಂದ ಅವಕಾಶವನ್ನು ಕಲ್ಪಿಸಿಕೊಟ್ಟ ಹಾಗಾಗುತ್ತದೆ. ಕನ್ನಡಕ್ಕೇ ಪ್ರೋತ್ಸಾಹ ಕೊಡುತ್ತದೆಂದು ಹೇಳುವ ಸರ್ಕಾರ ತರ್ಜುಮೆ ಮಾಡತಕ್ಕವರು ಇಂಗ್ಲೀಷ್‌ನವರ ಜಾಗದಲ್ಲಿ ಏತಕ್ಕೆ ಹಾಕಬಾರದು? ಇಂಗ್ಲೀಷ್ ಕಲಿತಿರಬೇಕೆಂಬ ಒತ್ತಡವನ್ನು ಏತಕ್ಕೆ ಹೇರುತ್ತಿದ್ದೀರಿ?

ಅಧ್ಯಕ್ಷರು.—ಇಲ್ಲಿ ಶೀಘ್ರಲಿಪಿಗಾರರ ಪ್ರಶ್ನೆ ಇರುವುದು ತರ್ಜುಮೆದಾರರ ಪ್ರಶ್ನೆಯಲ್ಲ.

ಶ್ರೀ ಶಿವಮೂರ್ತಿ.—ನಾನು ಹೇಳುತ್ತಿರುವುದರಿಂದ, ಈ ರೀತಿಯಾಗಿ ನೀವು ಮಾಡಿದರೆ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕವರಿಗೆ ಬಹಳ ಅನ್ಯಾಯವಾಗುತ್ತದೆ. ಇದನ್ನು ಸರ್ಕಾರದವರು ಪುನರ್ ಪರಿಶೀಲನೆ ಮಾಡಬೇಕು. ಕನ್ನಡ ಶೀಘ್ರಲಿಪಿಗಾರರು ಇಂಗ್ಲೀಷ್ ಕಲಿತಿರಬೇಕೆಂದರೆ ಕನ್ನಡ ಶೀಘ್ರಲಿಪಿ ಮಾತ್ರ ಕಲಿತವರಿಗೆ ಎಲ್ಲಿ ಅವಕಾಶ ಸಿಗುತ್ತದೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಿರುವುದು ಅವರಿಗೆ ತಿಳಿಯುವ ರೀತಿಯಲ್ಲಿ ನಾನು ಹೇಳುವುದರಲ್ಲಿ ಸಫಲವಾಗಲಿಲ್ಲವೆಂದಾಯಿತು. ಈಗ ಕನ್ನಡ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರಿಗೆ ಯಾವುದೇ ತರಹದ ಅನ್ಯಾಯವಾಗುವುದಿಲ್ಲ. ನಾವು ಇಂಗ್ಲೀಷ್ ಶೀಘ್ರಲಿಪಿಗಾರರನ್ನೂ ಸಹ ಪ್ರತ್ಯೇಕವಾಗಿ ನೇಮಕ ಮಾಡುತ್ತಾ ಹೋದರೆ ನಾಳೆ ಆ ಇಂಗ್ಲೀಷ್ ಶೀಘ್ರಲಿಪಿಗಾರರನ್ನು ನಾವು ಎಲ್ಲಿಗೆ ಕಳುಹಿಸಬೇಕು? ಅದಕ್ಕೇ ಎಲ್ಲರಿಗೂ ಒಂದೇ ಕ್ವಾಲಿಫಿಕೇಷನ್ ಇರಬೇಕೆಂದು ಮೆಟ್ರಿಕ್ಯುಲೇಷನ್ ಇಟ್ಟಿದ್ದೇವೆ. ಸಾಮಾನ್ಯವಾಗಿ ನನಗೆ ಗೊತ್ತಿರುವ ಮಟ್ಟಿಗೆ ಸಣ್ಣ ಪುಟ್ಟ ಶಹರದಲ್ಲಿರತಕ್ಕಂಥವರು ಎರಡೂ ಕಲಿಯುವುದಕ್ಕೆ ಆಸಕ್ತಿ ವಹಿಸಿದ್ದಾರೆ, ಇದರಿಂದ ಎಂಪ್ಲಾಯ್‌ಮೆಂಟ್ ಆಪರ್ಚ್ಯುನಿಟಿ ಹೆಚ್ಚಿದೆ. ಕನ್ನಡಿಗರು ಬಂದರೆ ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಿಲ್ಲ. ಇದು ಟ್ರಾನ್ಸಿಷನ್ ಪೀರಿಯಡ್, ಇದು ಶಾಶ್ವತವಾದ ಪದ್ಧತಿಯಲ್ಲ. ಇಂಗ್ಲೀಷ್ ಬಾರದೇ ಇರತಕ್ಕ ಕನ್ನಡಿಗರನ್ನು ತೆಗೆದುಕೊಂಡರೆ, ಇಂಗ್ಲೀಷ್ ಅರ್ಹತೆ ಇರತಕ್ಕಂಥವರನ್ನು ತೆಗೆದುಕೊಳ್ಳಬೇಕಾದರೆ ಮತ್ತೆ ಅದಕ್ಕೆ ಪ್ರತ್ಯೇಕವಾದ ಖರ್ಚು ಬೀಳುತ್ತದೆ. ಆದುದರಿಂದ ಕನ್ನಡಿಗರಿಗೇ ಹೆಚ್ಚು ಮಹತ್ವ ಕೊಡಬೇಕೆಂಬ ಉದ್ದೇಶದಿಂದಲೇ ನಾವು ಮಾಡಿದ್ದೇವೆ. ಬರೀ ಕನ್ನಡ ಶೀಘ್ರಲಿಪಿ, ಬೆರಳಚ್ಚು ಗೊತ್ತಿದ್ದವರನ್ನೂ ತೆಗೆದುಕೊಳ್ಳುತ್ತೇವೆ. ಇದರಿಂದ ಅವರಿಗೆ ಅನ್ಯಾಯ ವಾಗುವುದಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಆ ವಿಷಯ ಅಲ್ಲ. ಮೊದಲಿನಿಂದ ಅವರಿಗೆ ಕನ್ನಡ ಬರುತ್ತದೆ. ಆದರೂ ಕನ್ನಡ ಇಂಗ್ಲೀಷ್ ಎರಡರಲ್ಲೂ ತೇರ್ಗಡೆಯಾಗಿರಬೇಕೆಂದು ಹಾಕಿದ್ದಾರೆ. ಅಲ್ಲಿ ಏನೋ ಒಳ ರಾಜಕೀಯ ಇರಬೇಕೆಂದು ನನಗೆ ಅನುಮಾನ. ಮುಖ್ಯಮಂತ್ರಿಗಳು ಕೆಲವು ವಿಷಯಗಳನ್ನು ಹೇಳಿದರು. ಇದರಿಂದ ಒಳ್ಳೆಯ ಕೆಲಸಕಾರ್ಯಗಳಿಗೆ ಕುಂಠಿತವಾಗುತ್ತದೆ. ಕನ್ನಡ ಬೆರಳಚ್ಚುಗಾರರು ಇಂಗ್ಲೀಷ್ ಬೆರಳಚ್ಚನ್ನು ಕಲಿಯಬೇಕೆಂದು ಹೇಳಿರುವುದು ಸರಿಯಲ್ಲ. ಆದ್ದರಿಂದ, ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ, ಇನ್ನು ಮುಂದೆ ಕನ್ನಡ ಬೆರಳಚ್ಚುಗಾರರು ಮತ್ತು ಕನ್ನಡ ಶೀಘ್ರಲಿಪಿಗಾರರನ್ನು ನೇಮಿಸಿ ಕೊಂಡು ಕನ್ನಡವನ್ನು ಹಂತಹಂತವಾಗಿ ಆಡಳಿತ ಭಾಷೆಯನ್ನಾಗಿ ಮಾಡುತ್ತೇವೆಂದು ಹೇಳಿ ಇಂಗ್ಲೀಷನ್ನು ಕಡ್ಡಾಯವಾಗಿ ಕಲಿಯಬೇಕೆಂದರೆ ಒಪ್ಪುವುದಿಲ್ಲ. ಇದನ್ನು ನೋಡಿದರೆ ಇನ್ನೂ ಐ.ಎ.ಎಸ್. ಅಧಿಕಾರಿ ಗಳಿಗೆ ರಕ್ಷಣೆ ಕೊಡಬೇಕೆಂದು ಮಾಡಿದ್ದಾರಂದು ಹೇಳುತ್ತೇನೆ. ಅವರಿಗೆ ಖಂಡಿತ ಈ ವಿಷಯದಲ್ಲಿ ರಕ್ಷಣೆ ಕೊಡಬಾರದು. ಅವರೂ ಕನ್ನಡ ಕಲಿಯಬೇಕು. ಇಂಗ್ಲೀಷ್ ಪರಿಚಯ ಅವರಿಗೆ ಬೇಡವೆಂದು ಹೇಳುತ್ತೇನೆ. ಸರ್ಕಾರದಲ್ಲಿ ಇಂಗ್ಲೀಷ್ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು ಏನಿದ್ದಾರೆ ಅವರಿಗೆ ಕಡ್ಡಾಯವಾಗಿ ಕನ್ನಡವನ್ನು ಕಲಿಯಬೇಕೆಂದು ಆಜ್ಞೆ ಮಾಡಿಲ್ಲ. ಆಂಧ್ರ, ಉತ್ತರ ಭಾರತ, ತಮಿಳ್ನಾಡು, ಕೇರಳದಿಂದ ಬರತಕ್ಕ ಐ.ಎ.ಎಸ್. ಅಧಿಕಾರಿಗಳಿಗೆ ರಕ್ಷಣೆ ಕೊಡಬೇಕೆಂಬ ದೃಷ್ಟಿಯಿಂದ ಕನ್ನಡ ಶೀಘ್ರಲಿಪಿಗಾರರಿಗೆ ಕಲಿಯಬೇಕೆಂದು ಹೇಳುವುದನ್ನು ಒಪ್ಪುವುದಿಲ್ಲ. ಅವರು ಕನ್ನಡ ಒಂದನ್ನೇ ಕಲಿತರೆ ಸಾಕು. ಇದರ ಬಗ್ಗೆ ದಯವಿಟ್ಟು ಮುಖ್ಯಮಂತ್ರಿಗಳು ಉತ್ತರಿಸಬೇಕು.

ಶ್ರೀ ರಾಮಕೃಷ್ಣ ಹೆಗ್ಗಡೆ:—ಕನ್ನಡ ಬೆರಳಚ್ಚುಗಾರರು ಮತ್ತು ಕನ್ನಡ ಶೀಘ್ರಲಿಪಿಗಾರರಿಗೆ ಕಡ್ಡಾಯವಾಗಿ ಇಂಗ್ಲೀಷ್ ಕಲಿಯಬೇಕೆಂದು ಎಲ್ಲಿಯೂ ಹೇಳಿಲ್ಲ.

ಶ್ರೀ ಕೆ. ಶಿವಮೂರ್ತಿ.—ಕನ್ನಡದವರಿಗೆ ಮಾನ್ಯತೆ ಕೊಡಬೇಕು; ಇಲ್ಲದಿದ್ದರೆ ಹಳ್ಳಿಯಿಂದ ಬರತಕ್ಕ ಜನರಿಗೆ ಅನುಕೂಲವಾಗುವುದಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಇದು ಕನ್ನಡದ ಸರ್ಕಾರ ಎಂದು ಹೇಳಿಕೊಂಡು ಮಾತ್ರ ಈ ರೀತಿ ಮಾಡಬೇಡಿ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದು ಹಾಲಿ ಇರತಕ್ಕ ಕನ್ನಡ ಶೀಘ್ರಲಿಪಿಗಾರರಿಗಾಗಲಿ, ಬೆರಳಚ್ಚುಗಾರರಿಗಾಗಲಿ ಸಂಬಂಧಪಟ್ಟಿದ್ದಲ್ಲ. ಅವರಿಗೆ ಕಡ್ಡಾಯವಾಗಿ ಇಂಗ್ಲೀಷ್ ಕಲಿಯಬೇಕೆಂದು ಹೇಳುವುದಿಲ್ಲ. ಇದು ತಪ್ಪು ತಿಳುವಳಿಕೆಯಿಂದ ಆಗಿದೆ. ತಾತ್ಕಾಲಿಕವಾಗಿ ಕೆಲವು ತಿಂಗಳುಗಳ ಮಟ್ಟಿಗೆ ಹೊಸದಾಗಿ ನೇಮಕಾತಿ ಮಾಡಿಕೊಳ್ಳುವಾಗ ಎರಡೂ ಭಾಷೆಯ ಶೀಘ್ರಲಿಪಿ ಮತ್ತು ಬೆರಳಚ್ಚಿನ ಜ್ಞಾನ ಇದ್ದರೆ ಒಳ್ಳೆಯದೆಂದು ಮಾಡಿದ್ದೇವೆ. ಪ್ರತ್ಯೇಕವಾಗಿ ಇಂಗ್ಲೀಷ್ ಬೆರಳಚ್ಚುಗಾರರನ್ನು ಮತ್ತು ಕನ್ನಡ ಬೆರಳಚ್ಚುಗಾರರನ್ನು ತೆಗೆದುಕೊಂಡರೆ, 6 ತಿಂಗಳ ನಂತರ ಇಂಗ್ಲೀಷ್ ಬೆರಳಚ್ಚುಗಾರರು ನಿರುಪಯೋಗಿಗಳಾಗುತ್ತಾರೆ. ಆಮೇಲೆ ಅವರನ್ನು ಸಾಕುವುದು ಹೇಗೆ? ನಾವು ಕನ್ನಡದ ಹಿತದೃಷ್ಟಿಯಿಂದ ಕೆಲಸ ಮಾಡುತ್ತಿದ್ದೇವೆ; ಅದನ್ನು ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳದಿದ್ದರೆ ಹೇಗೆ?

ಶ್ರೀ ಜಿ. ನಾರಾಯಣಕುಮಾರ್.—ಇವತ್ತಿನ ದಿವಸ ಕನ್ನಡ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು ನೂರಾರು ಮಂದಿ ನಿರುದ್ಯೋಗಿಗಳಿದ್ದಾರೆ. ಎರಡು ವರ್ಷಗಳ ಕಾಲ ಕಷ್ಟಪಟ್ಟು ಓದಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಂದವರಿಗೆ ನೀವು ಇಂಗ್ಲೀಷ್ ಅನ್ನು -ಜೊತೆಗೆ ಕಲಿಯಲೇಬೇಕು ಎಂದರೆ ಮತ್ತೆ ಎರಡು ವರ್ಷ ಅವರು ಕಲಿಯುವುದೆಂದರೆ ಹೇಗೆ ಎಂಬುದನ್ನು ಮುಖ್ಯಮಂತ್ರಿಗಳು ಆಲೋಚನೆ ಮಾಡಿ ಸ್ಪಷ್ಟಪಡಿಸಲಿ; ಮತ್ತು ಕನ್ನಡದವರನ್ನು ತೆಗೆದುಕೊಳ್ಳುತ್ತೇವೆಂದು ಸ್ಪಷ್ಟೀಕರಣ ನೀಡಲಿ.

ಅಧ್ಯಕ್ಷರು.—ಈಗಾಗಲೇ ಮುಖ್ಯಮಂತ್ರಿಗಳು ಉತ್ತರಿಸಿದ್ದಾರೆ; ಅದನ್ನು ತಿಳಿದುಕೊಳ್ಳಿ.

ಶ್ರೀ ಜಿ. ನಾರಾಯಣಕುಮಾರ್.—ಆಜ್ಞೆ ನೋಡಿದರೆ ಗೊತ್ತಾಗುತ್ತದೆ. ಮುಖ್ಯಮಂತ್ರಿಗಳು ಅದನ್ನು ಓದಬೇಕು. ಅವರು ಆಂಗ್ಲ ಕಲಿಕೆಯನ್ನು ಕಡ್ಡಾಯ ಮಾಡಿದ್ದಾರೆ. ಇವತ್ತಿನ ದಿವಸ ಕನ್ನಡ ಶೀಘ್ರಲಿಪಿಗಾರರು ಕೆಲಸವಿಲ್ಲದೆ ಬೀದಿ ಬೀದಿ ಅಲೆಯುತ್ತಿದ್ದಾರೆ. ಅವರು ಇಂಗ್ಲೀಷನ್ನು ಕಲಿಯಬೇಕಾಗಿಲ್ಲವೆಂದು ಹೇಳಲಿ.

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಯ ವ್ಯಾಪ್ತಿಯನ್ನು ತಿಳಿದುಕೊಂಡು ಹೇಳಿದ ಉತ್ತರವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಿ. ಸುಮ್ಮನೆ ತೊಂದರೆ ಕೊಡಬೇಡಿ.

ಶ್ರೀ ಜಿ. ನಾರಾಯಣಕುಮಾರ್.—ನಾನು ಎಂದೂ ತೊಂದರೆ ಕೊಡುವುದಿಲ್ಲ.

ಅಧ್ಯಕ್ಷರು.—ನಾನು ನಿಂತಾಗ ನಿಲ್ಲಬಾರದು ಎಂಬ ಸಂಪ್ರದಾಯವನ್ನು ಮೊದಲು ಪಾಲಿಸಿ. ಹಾಗಿಲ್ಲದಿದ್ದರೆ ನನ್ನ ವ್ಯಾಪ್ತಿಯಲ್ಲಿರುವ ಕೆಲಸ ಮಾಡಬೇಕಾಗುತ್ತದೆ. ಗಮನ ಸೆಳೆಯುವ ಸೂಚನೆಯಲ್ಲಿ ಏನು ಸ್ಪಷ್ಟೀಕರಣ ಕೇಳಿದ್ದೀರಿ ಅದಕ್ಕೆ ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ. ಕನ್ನಡದ ಹುಡುಗರಿಗೆ ಅನುಕೂಲವಾಗುವಂಥ ತೀರ್ಮಾನವನ್ನು ಹೇಳಿದರೇ ಹೊರತು ಪುನಃ ಇಂಗ್ಲೀಷ್ ಕಲಿಯಬೇಕೆಂದು ಒತ್ತಾಯಿಸುತ್ತಿದ್ದೇವೆಂದು ಹೇಳಿಲ್ಲ. ಆದರೆ ನೀವು ಏತಕ್ಕೆ ಇದರ ಬಗ್ಗೆ ಒತ್ತಾಯಿಸುತ್ತಿದ್ದೀರಿ? ಈಗ ಮುಂದಿನ ಪ್ರಶ್ನೆಗೆ ಹೋಗೋಣ. ಕಾಳಮರಿಗೌಡರು ಸರ್ಕಾರದ ಗಮನ ಸೆಳೆಯಬಹುದು.

ಶ್ರೀ ಜಿ. ನಾರಾಯಣಕುಮಾರ್.—ಮುಖ್ಯಮಂತ್ರಿಗಳು ಆಜ್ಞೆಪತ್ರವನ್ನಾದರೂ ತರಿಸಿಕೊಂಡು ನೋಡಲಿ. ಅದನ್ನು ನೋಡಿದರೆ ಗೊತ್ತಾಗುತ್ತದೆ. ಅವರು ಮುಖ್ಯ ಉಪಾಧ್ಯಾಯರ ರೀತಿಯಲ್ಲಿ ವರ್ತಿಸಿದರೆ ಬಡಮಕ್ಕಳು ಏನು ಮಾಡುವುದು? ದಯಮಾಡಿ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರಿಸಬೇಕು.

ಅಧ್ಯಕ್ಷರು.—ಕಾಳಮರಿಗೌಡರು ಇಲ್ಲದಿರುವುದರಿಂದ ನಾಣಯ್ಯನವರು ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯಬಹುದು. ನಾರಾಯಣಕುಮಾರ್‌ರವರು ದಯಮಾಡಿ ಕುಳಿತುಕೊಳ್ಳಬೇಕು. ನಾನು ಈಗ ಮುಂದಕ್ಕೆ ಹೋಗಿದ್ದೇನೆ.

ಶ್ರೀ ಜಿ. ನಾರಾಯಣಕುಮಾರ್.—ಈ ರೀತಿ ಆದರೆ ಕನ್ನಡ ಉದ್ಧಾರವಾಗುವುದಿಲ್ಲ. ಇದು ಕನ್ನಡಕ್ಕೆ ದ್ರೋಹ ಬಗೆದಂತಾಗುತ್ತದೆ. ಮುಂದೆ ಇದರ ಬಗ್ಗೆ ದೊಡ್ಡ ಗಲಾಟೆ ಆಗುತ್ತದೆ.

ವಿಷಯ: ಕೊಡಗು ಜಿಲ್ಲೆಯಲ್ಲಿ ತಂಬಾಕು ಬೆಳೆಗಾರರ ಕಷ್ಟದ ಬಗ್ಗೆ.

ಶ್ರೀ ಎಂ. ಎಂ. ನಾಣಯ್ಯ (ಮಡಕೇರಿ).—ಮಾನ್ಯ ಅಧ್ಯಕ್ಷರೇ, ಮೈಸೂರು ಮತ್ತು ಕೊಡಗು ಜಿಲ್ಲೆಯ ತಂಬಾಕು ಬೆಳೆಗಾರರ ಕಷ್ಟವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ಎಲ್. ಗೌಡ (ಕೃಷಿ ಸಚಿವರು).—ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಗಿನ ಹೇಳಿಕೆಯನ್ನು ಮಾಡಬಯಸುತ್ತೇನೆ.—

ಸರ್ವೇಸಾಮಾನ್ಯವಾಗಿ ವ್ಯಾಪಾರಸ್ಥರು ವಿ.ಎಫ್.ಸಿ. ತಂಬಾಕನ್ನು ಆಗಸ್ಟ್ ಕೊನೆಯ ವಾರದಲ್ಲಿ ಕೊಳ್ಳಲು ಪ್ರಾರಂಭಿಸುವರು. ಆದರೆ ಈ ವರ್ಷ ಸಕಾಲದಲ್ಲಿ ಮಳೆ ಬಾರದ ಕಾರಣ ತಂಬಾಕು ಬೆಳೆಯ ಕಟಾವು ತಡವಾಗಿ ಶುರುವಾಗಿದ್ದು ವಿ.ಎಫ್.ಸಿ. ಮಾರಾಟ ಸೆಪ್ಟೆಂಬರ್ ತಿಂಗಳಲ್ಲಿ ಪ್ರಾರಂಭವಾಗುವ ನಿರೀಕ್ಷೆಯಿದೆ. ತಂಬಾಕು ಮಾರಾಟ, ತಂಬಾಕು ಮಂಡಲಿಯ ಅಧೀನಕ್ಕೆ ಒಳಪಟ್ಟ ವಿಷಯ. ಇದರ ಸಲುವಾಗಿ ತಂಬಾಕು ಮಾರಾಟ ಮಂಡಲಿಯವರು, ತಂಬಾಕು ಬೆಳೆಯುವ ರೈತರು, ಕಂಪೆನಿಯವರು, ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ತಂಬಾಕು ಮಾರುಕಟ್ಟೆಗೆ ಸಂಬಂಧಪಟ್ಟ ಸಂಸ್ಥೆಗಳು ಇವರುಗಳ ಸಭೆಯನ್ನು ದಿನಾಂಕ 29–8–1983 ರಂದು ಮೈಸೂರಿನಲ್ಲಿ ಕರೆದಿದ್ದರು. ಈ ಸಭೆಯಲ್ಲಿ 5–9–1983 ಕ್ಕೆ ಮಾರುಕಟ್ಟೆ ಕೇಂದ್ರಗಳನ್ನು ಪ್ರಾರಂಭಿಸುವ ಬಗ್ಗೆ ಹಾಗೂ ಎಕ್ಸ್-ಒಂದು (X–1) ಮತ್ತು ಎಲ್-ಒಂದು (L–1) ತಂಬಾಕಿನ ಗರಿಷ್ಟ ಬೆಲೆ ಕೆ.ಜಿ. ಒಂದಕ್ಕೆ ರೂಪಾಯಿ 16·50 ಎಂದು ನಿಗದಿಗೊಳಿಸಿದ್ದಾರೆ. ಇದಲ್ಲದೆ ನಮ್ಮ ಸರ್ಕಾರಕ್ಕೆ ಆಂಧ್ರಪ್ರದೇಶದಲ್ಲಿ ಕೇಂದ್ರ ಸರ್ಕಾರದ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್‌ನವರು ವಿ.ಎಫ್.ಸಿ. ತಂಬಾಕನ್ನು ಖರೀದಿ ಮಾಡಲು ದೊಡ್ಡ ಪ್ರಮಾಣದಲ್ಲಿ ಪ್ರಾರಂಭ ಮಾಡಿದ್ದು ಗೊತ್ತಾ ದೊಡನೆಯೇ, ನಮ್ಮ ಸರ್ಕಾರವೂ ಸಹ ಇದೇ ಮೇರೆಗೆ ತಂಬಾಕು ಬೆಳೆ ಖರೀದಿಸಲು ಪ್ರಾರಂಭ ಮಾಡ ಬೇಕೆಂದು ಭಾರತ ಸರ್ಕಾರದ ಮುಖಾಂತರ ಕೇಂದ್ರ ಸರ್ಕಾರದ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್‌ನನ್ನು ಒತ್ತಾಯಪಡಿಸಲಿದೆ. ಅದೂ ಅಲ್ಲದೆ ಸರ್ಕಾರವು ಮೈಸೂರು ತಂಬಾಕು ಕಂಪೆನಿಯ ಮುಖಾಂತರ ಸಾಕಷ್ಟು ಪ್ರಮಾಣದಲ್ಲಿ ತಂಬಾಕನ್ನು ಖರೀದಿಸಲು ಶೀಘ್ರವಾಗಿ ಪರಿಶೀಲಿಸುತ್ತಿದೆ.

ಸರ್ಕಾರಕ್ಕೆ ಬಂದಿರುವ ವರದಿಯಂತೆ ಮಾರ್ಕೆಟ್ಟುಗಳನ್ನು ತೆರೆಯಲು ಬೇಕಾಗುವಷ್ಟು ವರ್ಗೀಕರಿಸಿದ ತಂಬಾಕು ಸಾಕಷ್ಟು ಪ್ರಮಾಣದಲ್ಲಿ ಬರದೇ ಇರುವ ಕಾರಣ ಮಾರ್ಕೆಟ್ಟುಗಳನ್ನು ತೆರೆಯಲಾಗಲಿಲ್ಲ. ಅದೂ ಅಲ್ಲದೆ ಆಂಧ್ರಪ್ರದೇಶದಲ್ಲಿ ಸಾಕಷ್ಟು ತಂಬಾಕಿನ ಶೇಖರಣೆ ಇರುವುದರಿಂದ ಅಲ್ಲಿಯ ಖರೀದಿದಾರರು ತಂಬಾಕನ್ನು ಖರೀದಿಸಲು ಇನ್ನೂ ಆಸ್ಥೆಯನ್ನು ತೋರಿಸಿಲ್ಲ.

ಶ್ರೀ ಕೆ. ಎಸ್. ಕಾಳಮರಿಗೌಡ.—ಕರ್ನಾಟಕ ರಾಜ್ಯದಲ್ಲಿ ಸುಮಾರು 25 ಸಾವಿರ ಜನ ತಂಬಾಕು ಬೆಳೆಗಾರರು ಏನಿದ್ದಾರೆ ಅವರೆಲ್ಲ ಹೊಗೆಸೊಪ್ಪು ಬೆಳೆದುಕೊಂಡು ಮಾರಾಟಕ್ಕಾಗಿ ಕಾಯುತ್ತಿದ್ದಾರೆ. ಜುಲೈ ತಿಂಗಳಲ್ಲೇ ಮಾರ್ಕೆಟ್ಟನ್ನು ಓಪನ್ ಮಾಡಬೇಕಾಗಿತ್ತು. ಆದರೆ ಇದುವರೆಗೆ ಆಗಿಲ್ಲ. ಇದಕ್ಕೆ ಕಾರಣ ಬಹಳ ಇದೆ. ಆಂಧ್ರದಲ್ಲಿದ್ದ ವ್ಯಾಪಾರಸ್ಥರು ಕರ್ನಾಟಕದಲ್ಲಿ ಕಳೆದ 8–10 ವರ್ಷಗಳಿಂದ ಖರೀದಿ ಮಾಡು ತ್ತಿದ್ದರು. ಈ ವರ್ಷ ಆಂಧ್ರದಲ್ಲಿ ಹೆಚ್ಚಿಗೆ ಹೊಗೆಸೊಪ್ಪು ಬಂದದ್ದರಿಂದ ಕರ್ನಾಟಕ ರಾಜ್ಯಕ್ಕೆ ಆಂಧ್ರದ ಮಾರ್ಕೆಟ್‌ನವರು ಬಂದಿಲ್ಲ. ಅಲ್ಲಿ ಹೆಚ್ಚಿಗೆ ಬೆಳೆಯಾದ ಕಾರಣ ಅಲ್ಲಿಯ ವ್ಯಾಪಾರಸ್ಥರಿಗೆ ತೊಂದರೆಯಾಗಿದೆ. ಮಾಲು ಜಾಸ್ತಿಯಾಗಿ ರಫ್ತು ವ್ಯಾಪಾರ ಕಡಿಮೆಯಾಗಿದೆ. ಅದೇ ರೀತಿ, ಟ್ರೇಡರ್ಸ್ ಕೂಡ ನಮ್ಮ ಕರ್ನಾಟಕ ರಾಜ್ಯಕ್ಕೆ ಬಂದಿಲ್ಲ.

ತಾವೂ ತಮ್ಮ ಛೇಂಬರ್‌ನಲ್ಲಿ ಸಭೆ ಕರೆದಿದ್ದಿರಿ. ಆಗ ಕರ್ನಾಟಕ ರಾಜ್ಯದಲ್ಲಿ ಏನು ಬೆಳೆಯಾಗುತ್ತದ್ದೋ ಅದನ್ನು ಸಂಪೂರ್ಣವಾಗಿ ಖರೀದಿ ಮಾಡಬೇಕೆಂದು ತಮ್ಮಲ್ಲಿ ಮನವರಿಕೆ ಮಾಡಿಕೊಂಡಿದ್ದೆವು. ಮೊನ್ನೆ ಕೂಡ ಟೊಬ್ಯಾಕೊ ಬೋರ್ಡಿನವರು ಟ್ರೇಡರ್ಸ್ ಮತ್ತು ಬೆಳೆಗಾರರನ್ನು ಕರೆದು ಮಾತನಾಡಿದ್ದಾರೆ. ವ್ಯಾಪಾರಸ್ಥರು ಎಕ್ಸ್‌ಪೋರ್ಟ್ ಕಡಿಮೆಯಾಗಿರುವುದರಿಂದ ತೆಗೆದುಕೊಳ್ಳುವುದು ಕಡಿಮೆಯಾಗಿದೆ. ಆದ್ದರಿಂದ ನಾವು 15 ಮಿಲಿಯನ್ ಕೆ.ಜಿ.ಗಳನ್ನು ಕೊಳ್ಳುತ್ತೇವೆ, ಇನ್ನು 10 ಮಿಲಿಯನ್ ಕೆ.ಜಿ. ಹೊಗೆ ಸೊಪ್ಪು ಏನಿದೆಯೋ ಅದನ್ನು ಕರ್ನಾಟಕ ರಾಜ್ಯದವರು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇಷ್ಟು ಹೊತ್ತಿಗೆ ಮಾರ್ಕೆಟ್ ಓಪನ್ ಆಗಬೇಕಾಗಿತ್ತು. ಜುಲೈನಲ್ಲಿ ಮಾರ್ಕೆಟ್ ಪ್ರಾರಂಭ ಮಾಡಬೇಕಾಗಿತ್ತು. ಈಗ ಡಿಲೇ ಆಗಿದೆ. ಸರ್ಕಾರ ಈ ಸಮಯದಲ್ಲಿ ನೇರವಾಗಿ ಪ್ರವೇಶ ಮಾಡಬೇಕು. ಆಂಧ್ರಪ್ರದೇಶದಲ್ಲಿ ಮಾರ್ಕೆಟ್ ಕಡಿಮೆಯಾಗಿದೆ. ಕರ್ನಾಟಕ ಸರ್ಕಾರ ಮಧ್ಯ ಪ್ರವೇಶಿಸದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಹದಿನಾರೂವರೆ ರೂಪಾಯಿಗಳನ್ನು ರೇಟ್ ನಿಗದಿ ಮಾಡಿದ್ದರು. ಹೆಚ್ಚಿಗೆ ಇರತಕ್ಕ ಹೊಗೆಸೊಪ್ಪನ್ನು ಹೇಗಿದ್ದರೂ ಕೊಡಲೇಬೇಕು, ಆಗ ಕಡಿಮೆ ಬೆಲೆಗೆ ಕೊಡುತ್ತಾರೆ ಎಂದು ರೈತರ ದೌರ್ಬಲ್ಯವನ್ನು ಉಪಯೋಗಿಸಿ ಕೊಳ್ಳಲು ವ್ಯಾಪಾರಸ್ಥರು ಪ್ರಯತ್ನಿಸುತ್ತಿದ್ದಾರೆ. ಸರ್ಕಾರ ಮಧ್ಯ ಪ್ರವೇಶಿಸಿ ಇಷ್ಟು ಮಿಲಿಯನ್ ಕೆ.ಜಿ. ಹೊಗೆಸೊಪ್ಪನ್ನು ತೆಗೆದುಕೊಳ್ಳುತ್ತೇವೆ ಎಂಬ ಭರವಸೆಯನ್ನು ಕೊಟ್ಟರೆ ಹೊಗೆಸೊಪ್ಪು ಬೆಳೆಯುವ ರೈತರಿಗೆ ಅನುಕೂಲವಾಗುತ್ತದೆ. ಎಂ.ಟಿ.ಸಿ.ಯವರು ಒಂದು ಮಾತು ಹೇಳುತ್ತಿದ್ದಾರೆ...

ಅಧ್ಯಕ್ಷರು.—ಭಾಷಣ ಮಾಡುತ್ತಾ ಹೋದರೆ ಕಷ್ಟವಾಗುತ್ತದೆ. ಉತ್ತರ ಹೇಳುವುದಕ್ಕಾದರೂ ಸಮಯ ಬೇಡವೆ ?

ಶ್ರೀ ಕೆ. ಎಸ್. ಕಾಳಮರಿಗೌಡ.—ನನಗೆ ಭರವಸೆ ಕೊಡಲಿ ನೇರವಾಗಿ.

ಶ್ರೀ ಎಂ. ಎಂ. ನಾಣಯ್ಯ.—ವರ್ಗೀಕರಿಸಿದ ತಂಬಾಕು ಸಾಕಷ್ಟು ಸಂಖ್ಯೆಯಲ್ಲಿಲ್ಲ ಎಂದು ಮಂತ್ರಿಗಳು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು. ಬೇಕಾದಷ್ಟು ಸ್ಟಾಕ್ ಇದೆ. ಪರ್ಚೇಸ್ ಮಾಡಲಿಕ್ಕೆ ಬರಲಿಲ್ಲ ಅಷ್ಟೆ. ಸಂಪೂರ್ಣ ನೇರವಾಗಿ ಬಂದು ಖರೀದಿ ಮಾಡಿ ರೈತರನ್ನು ಕಷ್ಟನಷ್ಟದಿಂದ ಪಾರು ಮಾಡಬೇಕು. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಅನೇಕರು ಈ ವ್ಯವಸಾಯ ಮಾಡುತ್ತಿದ್ದಾರೆ. ಕಾಫಿ ಬೆಳೆ, ಏಲಕ್ಕಿ ಬೆಳೆ ಹೋಗಿದೆ. ತಂಬಾಕು ಬೆಳೆಯೂ ನಷ್ಟವಾದರೆ ಕೊಡಗಿನ ಜನರು ಹೇಗೆ ಬದುಕುತ್ತಾರೆ ಎಂಬುದನ್ನು ಯೋಚನೆ ಮಾಡಬೇಕು. ಎಕ್ಸ್-1 ಮತ್ತು ಎಲ್-1 ಗೆ 16 ರೂಪಾಯಿ ನಿಗದಿ ಮಾಡಿದ್ದಾನೆ. ಇದು ಸಾಲುವುದಿಲ್ಲ. ಇದನ್ನು ಹೆಚ್ಚು ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ನಂಜಪ್ಪ.—ಹೊಗೆಸೊಪ್ಪನ್ನು ಕೃಷ್ಣರಾಜನಗರ, ಹುಣಸೂರು, ಪಿರಿಯಾಪಟ್ಟಣ ಮತ್ತು ಅರಕಲಗೂಡು ತಾಲ್ಲೂಕಿನಲ್ಲಿ ವಿಶೇಷವಾಗಿ ಬೆಳೆಯುತ್ತಾರೆ. ಈ ಹೊಗೆಸೊಪ್ಪನ್ನು ಸಿಗರೇಟಿಗೆ ಉಪಯೋಗಿಸುತ್ತಾರೆ; ವಿದೇಶಕ್ಕೆ ರಫ್ತು ಮಾಡುತ್ತಾರೆ. ಸಿಗರೇಟ್ ಕಂಪೆನಿಯವರು ಹೊಗೆಸೊಪ್ಪಿನಿಂದ ವಿಶೇಷವಾಗಿ ಲಾಭ ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಮಳೆ ಆಶ್ರಯದಲ್ಲಿ ಹೊಗೆಸೊಪ್ಪು ಬೆಳೆಯಬೇಕಾದ ರೈತರು ಮಳೆ ಇಲ್ಲದೆ ನಷ್ಟ ಮಾಡಿಕೊಂಡು ಅಲ್ಪಸ್ವಲ್ಪ ಬೆಳೆದು ಸೌದೆಗಾಗಿಯೂ ಕಷ್ಟಪಟ್ಟು ಬೇಯಿಸಿದ ಹೊಗೆಸೊಪ್ಪನ್ನು ಐ.ಎಲ್.ಟಿ.ಡಿ.ಯವರು ಮಲೆನಾಡು ಟೊಬ್ಯಾಕೊ ಕಂಪನಿಯವರು ಕೊಂಡುಕೊಳ್ಳದೇ ಅವರ ಕಪಿಮುಷ್ಟಿಯಿಂದ ರೈತರಿಗೆ ತೊಂದರೆಯಾಗಿದೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಆಶ್ರಯದಲ್ಲಿ ಇರತಕ್ಕ ಮೈಸೂರು ಟೊಬ್ಯಾಕೊ ಕಂಪನಿಯವರು ರೈತರ ನೆರವಿಗೆ ಬಂದು ಹೊಗೆಸೊಪ್ಪನ್ನು ಕೊಂಡುಕೊಂಡು ಸಂಕಷ್ಟಕ್ಕೆ ಒಳಗಾಗಿರುವ ರೈತರ ಕಷ್ಟವನ್ನು ಪರಿಹರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ನನ್ನ ಕ್ಷೇತ್ರದಲ್ಲಿ ಸುಮಾರು ಎರಡು ಸಾವಿರ ಮೇಲ್ಪಟ್ಟು ಬ್ಯಾರೆಲ್ ಮನೆಗಳಿವೆ. ಆದರೂ ಕೂಡ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಮಳೆ ಬರದೆ ನಾಟಿ ಹಾಕಿದ್ದು ಒಣಗಿ ಹೋಗುವ ಪರಿಸ್ಥಿತಿ ಇತ್ತು. ಕೊನೆಗೆ ಕಳೆದ ವರ್ಷಕ್ಕಿಂತ ಮಳೆ ಚೆನ್ನಾಗಿ ಬಂದಿದೆ. ನನ್ನ ಕ್ಷೇತ್ರ ಮತ್ತು ಬೇರೆ ಕ್ಷೇತ್ರ ಸೇರಿಸಿಕೊಂಡು 25 ಮಿಲಿಯನ್ ಕೆ.ಜಿ. ಹೊಗೆಸೊಪ್ಪು ಬರಬಹುದು. ಕಳೆದ ಸಾಲಿನಲ್ಲಿ ಮಾರ್ಕೆಟ್ ಬೇಗನೆ ಶುರುವಾಗಿತ್ತು. ಕ್ಯೂರಿಂಗ್ ಮಾಡುವುದಕ್ಕೆ ಪ್ರಾರಂಭವಾಗಿ ಎರಡು ತಿಂಗಳಾಗಿದೆ. ರೈತರು ಅಲ್ಲಲ್ಲಿ ಅದನ್ನು ಸ್ಟಾಕ್ ಮಾಡಿದ್ದಾರೆ. ಕ್ಯೂರಿಂಗ್ ಕಂಡೀಷನ್ ಸರಿಯಾಗಿಲ್ಲದೇ ಇದ್ದರೆ ಹೊಗೆಸೊಪ್ಪು ಮೆತ್ತಗಾಗಿ 16 ರೂಪಾಯಿ ಬೆಲೆ ಬಾಳುವ ಹೊಗೆಸೊಪ್ಪು 3 ರೂಪಾಯಿಗೂ ಬೆಲೆ ಬಾಳದಂತಾಗುತ್ತದೆ. ಆಗ ಕಂಪನಿಯವರು ದುರುಪಯೋಗ ಮಾಡಿಕೊಂಡು ರೈತರಿಗೆ ತೊಂದರೆ ಕೊಡುತ್ತಾರೆ. ನಮ್ಮ ಕಡೆ ರೈತರಿಗೆ ಇದು ಬಿಟ್ಟರೆ ಬೇರೆ ದುಡ್ಡಿನ ಬೆಳೆ ಯಾವುದೂ ಇಲ್ಲ. ಜನ ನಂಬಿಕೊಂಡಿರತಕ್ಕದ್ದು ಇದನ್ನೇ. ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಮಟ್ಟಕ್ಕೆ ತರಬೇಕಾದರೆ ಹೊಗೆಸೊಪ್ಪಿನ ಬೆಳೆ ಒಂದೇ ಅವರಿಗೆ ಆಧಾರ. ಹೊಗೆಸೊಪ್ಪು ಬೆಳೆಗಾರರಿಗೆ ಆಗಿರತಕ್ಕ ತೊಂದರೆಯನ್ನು ಗಮನಿಸಿ ಸರ್ಕಾರ ಈಗಾಗಲೇ 15 ದಿವಸದ ಹಿಂದೆಯೇ ವ್ಯವಸ್ಥೆ ಮಾಡಬೇಕಾಗಿತ್ತು. ಕಳೆದ ಸಾಲಿನಲ್ಲಿ ಮಂತ್ರಿಗಳ ಚೇಂಬರ್‌ನಲ್ಲಿ ಮೀಟಿಂಗ್ ಕರೆದಿದ್ದಾಗ ನಮ್ಮ ಅಭಿಪ್ರಾಯಗಳನ್ನು ತೆಗೆದುಕೊಂಡರು. ಒಂದೆರಡು ಮಿಲಿಯನ್ ಕೆ.ಜಿ. ಹೊಗೆಸೊಪ್ಪನ್ನು ನಾವು ಕೊಂಡುಕೊಳ್ಳಬಹುದು ಎಂದು ಎಂ.ಡಿ.ಯವರು ಅಭಿಪ್ರಾಯ ಕೊಡುತ್ತಿದ್ದರು. ಬೇರೆ ರಾಜ್ಯದವರು 15 ಮಿಲಿಯನ್ ಕೆ.ಜಿ. ಕೊಂಡರೆ ಇನ್ನೂ 10 ಮಿಲಿಯನ್ ಕೆ.ಜಿ. ನಮ್ಮಲ್ಲಿ ಉಳಿದುಕೊಳ್ಳುತ್ತದೆ. ಎಂ.ಟಿ.ಸಿ.ಯವರು ಕೊಳ್ಳುವುದಕ್ಕೆ ದುಡ್ಡಿಲ್ಲ ಎಂದು ಹೇಳುತ್ತಾರೆ. ಸರ್ಕಾರದವರು ಮನಸ್ಸು ಮಾಡಿ 5 ರಿಂದ 10 ಮಿಲಿಯನ್ ಕೆ.ಜಿ. ವರೆಗೆ ಕೊಂಡುಕೊಂಡರೆ ಹೊಗೆಸೊಪ್ಪಿನ ಬೆಳೆಗಾರರಿಗೆ ಅನುಕೂಲವಾಗುತ್ತದೆ. ಇಲ್ಲದೇಹೋದರೆ ಪ್ರಯೋಜನವಾಗುವುದಿಲ್ಲ. ಎಂ.ಟಿ.ಸಿ.ಯವರಿಗೆ ಹೆಚ್ಚಾಗಿ ದುಡ್ಡು ಕೊಟ್ಟು 5 ರಿಂದ 10 ಮಿಲಿಯನ್‌ವರೆಗೆ ಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಎಕ್ಸ್‌ಪೋರ್ಟ್ ಬಗ್ಗೆ ಸರ್ಕಾರಕ್ಕೆ ತೊಂದರೆ ಇಲ್ಲ. ಬೇರೆ ದೇಶಗಳಿಗೆ ಸರ್ಕಾರವೇ ಏಜೆನ್ಸಿ ಕ್ರಿಯೇಟ್ ಮಾಡಿ ಸೌಲಭ್ಯವನ್ನು ಮಾಡಿಕೊಡಬಹುದು. ಆದ್ದರಿಂದ ಸರ್ಕಾರದವರು ಪ್ರವೇಶ ಮಾಡಿ ಹೊಗೆಸೊಪ್ಪನ್ನು ಕೊಂಡುಕೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಲ್. ಗೌಡ (ಮಾನ್ಯ ಕೃಷಿ ಮಂತ್ರಿಗಳು).—ಖರೀದಿ ನಿಧಾನವಾಗುವುದಕ್ಕೆ ಕಾರಣ ಮಾನ್ಯ ಸ್ನೇಹಿತರಾದ ಮಲ್ಲಪ್ಪನವರು ತಿಳಿಸಿದ ಹಾಗೆ ಮಳೆ ತಡವಾಗಿದ್ದರಿಂದ ಬೆಳೆಯಾಗುವುದು ನಿಧಾನವಾಗಿದ್ದು. ಆಂಧ್ರಪ್ರದೇಶದಲ್ಲಿ ಈಗಾಗಲೇ ಸ್ಟಾಕ್ ಜಾಸ್ತಿ ಇರುವುದರಿಂದ ಆಂಧ್ರಪ್ರದೇಶದ ವರ್ತಕರು ಇದರ ಬಗ್ಗೆ ಹೆಚ್ಚು ಆಸ್ಥೆ ವಹಿಸಿಲ್ಲ. ಏನೇ ಆದರೂ 5-9-1983 ಕ್ಕೆ ಮಾರ್ಕೆಟ್ ಪ್ರಾರಂಭ ಮಾಡುವುದಕ್ಕೆ ಎಲ್ಲರೂ ಒಪ್ಪಿಕೊಂಡಿದ್ದಾರೆ. ಟೊಬ್ಯಾಕೊ ಬೋರ್ಡಿನವರೂ ಒಪ್ಪಿಕೊಂಡಿದ್ದಾರೆ. ರೈತರೂ ಆ ಸಭೆಗೆ ಹೋಗಿದ್ದರು. ಕಾಳಮರಿಗೌಡರು ಕೇಂದ್ರ ಟೊಬ್ಯಾಕೊ ಬೋರ್ಡಿನ ಸದಸ್ಯರು. ಅವರ ಸಲಹೆಯನ್ನು ತೆಗೆದುಕೊಂಡು ನಾವು ಕೆಲಸ ಮಾಡುತ್ತಿದ್ದೇವೆ. ನಾವು ಬೇರೆಯವರ ಮೇಲೆ ಅವಲಂಬನೆಯಾಗಿಲ್ಲ ಮೈಸೂರು ಟೊಬ್ಯಾಕೊ ಕಂಪನಿಗೆ ನೀವು ಪ್ರವೇಶ ಮಾಡಿ ಕೊಂಡುಕೊಳ್ಳಿ ಎಂದು ಆದೇಶ ಕೊಟ್ಟಿದ್ದೇವೆ

ಅವರು ಎಷ್ಟು ಕೊಂಡುಕೊಳ್ಳುತ್ತಾರೆ ಎಂಬುದು ಮಾರ್ಕೆಟ್ಟಿನ ಸಂದರ್ಭ ಮತ್ತು ಆರ್ಥಿಕ ವ್ಯವಸ್ಥೆ ಮೇಲೆ ಅವಲಂಬನೆಯಾಗಿದೆ.

ಶ್ರೀ ಕೆ. ಎಸ್. ಕಾಳಮರಿಗೌಡ.—5ನೇ ತಾರೀಖು ಪ್ರವೇಶ ಮಾಡುತ್ತೇವೆಂದು ಹೇಳಿದ್ದಾರೆ. ಅವರು ಬರಲಿ, ಬರದೇಹೋಗಲಿ 5ನೇ ತಾರೀಖು ಖಂಡಿತ ಮಾರ್ಕೆಟ್ ಓಪನ್ ಮಾಡುತ್ತೇವೆ ಎಂಬ ಭರವಸೆಯನ್ನು ಸರ್ಕಾರದವರು ಕೊಡುತ್ತಾರೆಯೇ ? ಅವರು ಕೊಳ್ಳಲಿ, ಕೊಳ್ಳದೇ ಇರಲಿ ರೈತರ ಹತ್ತಿರ ಇರುವ ಎಲ್ಲ ಹೊಗೆಸೊಪ್ಪನ್ನು ಕೊಂಡುಕೊಳ್ಳಬೇಕೂ. ಇಲ್ಲದಿದ್ದರೆ ಬಹಳ ಕಷ್ಟವಾತ್ತದೆ. ನಾನು ಏತಕ್ಕೆ ಹೇಳುತ್ತೇನೆ ಎಂದರೆ...

ಅಧ್ಯಕ್ಷರು.—ನೀವು ಏತಕ್ಕೆ ಹೇಳುತ್ತೇನೆ ಎಂದರೆ ಎಂದು ಭಾಷಣ ಪ್ರಾರಂಭಿಸಿದರೆ ನನಗೆ ಕಷ್ಟ ವಾಗುತ್ತದೆ. ಆಯಿತು ಬಿಡಿ, ಹೇಳಿದ್ದೀರಿ.

ಶ್ರೀ ಬಿ. ಎಲ್. ಗೌಡ.—ಇದು ಸಿಂಪಲ್ ಇದೆ. ಪ್ರಿನ್ಸಿಪಲ್ ಆಫ್ ಡಿಮಾಂಡ್ ಅಂಡ್ ಸಪ್ಲೈ ಪ್ರಕಾರ ನಮಗೆ ಎಷ್ಟು ಬೇಕೋ ಅಷ್ಟು ತೆಗೆದುಕೊಳ್ಳುತ್ತೇವೆ. ನಾವು ಕೊಂಡುಕೊಂಡಮೇಲೆ ಹೊರ ದೇಶಕ್ಕೆ ಕಳುಹಿಸಬೇಕಾಗುತ್ತದೆ. ಇಲ್ಲದಿದ್ದರೆ ಲುಕ್ಸಾನು ಆಗುತ್ತದೆ. ಗೋಡೌನಿನಲ್ಲಿ ಇಟ್ಟುಕೊಂಡು ಲುಕ್ಸಾನು ಮಾಡಿಕೊಳ್ಳುವುದೇ ? ಮುಂದೆ ಮಾರ್ಕೆಟ್ ಯಾವ ರೀತಿ ನಡೆಯುತ್ತದೆ ಅದನ್ನು ನೋಡಿ ಕೊಂಡು ಇದನ್ನು ಮಾಡಬೇಕಾಗುತ್ತದೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಮಾನ್ಯ ಮಂತ್ರಿಗಳು ಡಿಮಾಂಡ್ ಅಂಡ್ ಸಪ್ಲೈ ಬಗ್ಗೆ ಹೇಳುತ್ತಿದ್ದಾರೆ. ಈ ರೀತಿ ಭರವಸೆ ಕೊಡುವುದಾದರೆ ಈ ವಿಷಯವನ್ನು ಮಾನ್ಯ ಮಂತ್ರಿಗಳಿಗೆ ಕೇಳುತ್ತಲೇ ಇರಲಿಲ್ಲ. ಹೇಗಿದ್ದರೂ ಮಾರ್ಕೆಟ್‌ನವರು ಪರ್ಚೇಸ್ ಮಾಡೇ ಮಾಡುತ್ತಾರೆ. ಆದು ಅಲ್ಲ ಪ್ರಶ್ನೆ. ಇದು ಪ್ರಮುಖವಾದ ವಿಚಾರ ಇದೆ.

ಅಧ್ಯಕ್ಷರು.—ಇದು ಪ್ರಮುಖವಾದ ವಿಚಾರ ಎಂದೇ ನಾನು ಮೂರು ಸಾರಿ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕಾಳಮರಿಗೌಡ.—20–30 ಸಾವಿರ ಬೆಳೆಗಾರರಿದ್ದಾರೆ. 30–40 ಕೋಟಿ ರೂಪಾಯಿಗಳ ವ್ಯವಹಾರ ಇದೆ. ಎಷ್ಟು ಬೆಳೆ ಉಳಿಯುತ್ತದೆ ಅದೆಲ್ಲವನ್ನೂ ಖರೀದಿ ಮಾಡುತ್ತೀರಾ ?

ಶ್ರೀ ಮಲ್ಲಪ್ಪ.—ಹಲವಾರು ರೈತರು ಈ ಬೆಳೆಯನ್ನು ಬೆಳೆಯುತ್ತಿದ್ದಾರೆ. ಇವರ ರಕ್ಷಣೆಗೆ ಸರ್ಕಾರ ಹೋಗಬೇಕು. ತಂಬಾಕು ಬೆಳೆಗಾರರ ನೆರವಿಗೆ ಸರ್ಕಾರ ಹೋಗದಿದ್ದರೆ ಅವರು ಬಹಳ ಕಷ್ಟ ನಷ್ಟಗಳಿಗೆ ಒಳಗಾಗಬೇಕಾಗುತ್ತದೆ. ನೀವು ಕೇವಲ ಆಂಧ್ರ ಸರ್ಕಾರದ ಮೇಲೆ ಅವಲಂಬನೆ ಆಗುವುದು ಬೇಡ. ನಮ್ಮ ಸರ್ಕಾರಕ್ಕೆ ಎಷ್ಟೇ ನಷ್ಟವಾಗಲೀ ಅವರ ರಕ್ಷಣೆ ದೃಷ್ಟಿಯಿಂದ ತಾವು ಮುಂದೆ ಬರಬೇಕು.

ಶ್ರೀ ಬಿ. ಎಲ್. ಗೌಡ.—ನಮ್ಮ ಇತಿಮಿತಿಗಳಿಗೆ ಒಳಪಟ್ಟು ಕರ್ನಾಟಕದಲ್ಲಿ ಹಿಂದೆಂದೂ 3 ಮಿಲಿಯನ್ ಟನ್‌ಗಿಂತ ಜಾಸ್ತಿ ತೆಗೆದುಕೊಂಡಿಲ್ಲ.

ANNOUNCEMENT

Leave of Absence

MR. SPEAKER.—I have received a letter from Sri. Sudhindra Rao Kasbe, Member, Legislative Assembly, requesting leave of absence from 11th August, 1983 to 31st August, 1983 due to ill-health.

"Is it the pleasure of the House that permission be granted to Sri. Sudhindra Rao Kasbe for remaining absent from 11th August, 1983 to 31st August, 1983 ?"

(No. Member dissented)

MR. SPEAKER.—Permission to remain absent is granted.

MR. SPEAKER.—I have also received a letter from Sri. Raja Amarappa Naik, Member, Legislative Assembly, requesting leave of absence for a period of 60 days with effect from 11th August, 1983 due to ill-health.

"Is it the pleasure of the House that permission be granted to Sri. Raja Amarappa Naik for remaining absent from 11th August, 1983 ?"